<u>ಅಸಲು ದಾವಾ ಸಂಖ್ಯೆ **-205/2020**</u>                ಪಿ.ಡಬ್ಲ್ಯೂ**:-1**

ದಿನಾಂಕಃ **11-03-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- **3** ಮತ್ತು **4** ನೇ ಪ್ರತಿವಾದಿ ಪರ ವಕೀಲರಿಂದ :-</u>

1 ನೇ ಪ್ರತಿವಾದಿ ನನ್ನ ತಂದೆ. ನನ್ನ ತಂದೆಗೆ ಇಬ್ಬರು ಹೆಂಡತಿಯರು ಅಂದರೆ ಮಲ್ಲಮ್ಮ ಮತ್ತು ಹಾಲಮ್ಮ. ಮಲ್ಲಮ್ಮನಿಗೆ ಒಬ್ಬನೇ ಮಗ ಅಂದರೆ 2 ನೇ ಪ್ರತಿವಾದಿ. ಹಾಲಮ್ಮನಿಗೆ ಇಬ್ಬರು ಮಕ್ಕಳು ಅಂದರೆ ಅಮೃತ ಮತ್ತು ಅಶ್ವಿನಿ. ಅಂದರೆ ನಾನು ಮತ್ತು 2 ನೇ ವಾದಿ. ದಾವಾ ಆಸ್ತಿಯು ನಮ್ಮ ತಂದೆಯ ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ನಮ್ಮ ತಂದೆಯರಿಗೆ ಮೊದಲನೇ ಹೆಂಡತಿ ಮಲ್ಲಮ್ಮ ತೀರಿಕೊಂಡ ನಂತರ ನಮ್ಮ ತಾಯಿ ಹಾಲಮ್ಮನನ್ನು ಮದುವೆಯಾಗಿರುತ್ತಾರೆ. ದಾವಾ ಆಸ್ತಿಯ ಸರ್ವೇ ನಂ.11/1 ರಲ್ಲಿ 4 ಎಕರೆ 18 ಗುಂಟೆ ಜಮೀನು ಇದ್ದು ಅದರಲ್ಲಿ ನಮ್ಮ ತಂದೆಗೆ ಭಾಗಾಂಶದ ಮೂಲಕ 1 ಎಕರೆ 10 ಗುಂಟೆ ಜಮೀನು ಬಂದಿರುತ್ತದೆ. ದಾವಾ ಆಸ್ತಿಯ ಚಕ್ಕುಬಂಧಿ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶಕೋರಿದ್ದು ನೀಡಿ ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.